ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 885
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 12.03.2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಕೃಷ್ಣಾ ಮೇಲ್ದಂಡೆ ಯೋಜನೆಯ ಅನುಷ್ಠಾನಕ್ಕಾಗಿ ಹೊಸದಾಗಿ ನಿರ್ಮಿಸುತ್ತಿರುವ 20 ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಗಳಿಗಾಗಿ ಎಷ್ಟು ಎಕರೆ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ; ಅವುಗಳು ಯಾವ ಹಂತದಲ್ಲಿವೆ;	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್. 519.60ಮೀ. ನಿಂದ 524.256ಮೀ.ಗೆ ಎತ್ತರಿಸುವುದರಿಂದ ಹಿನ್ನೀರಿನಲ್ಲಿ ಒಟ್ಟು 20 ಗ್ರಾಮಗಳು ಮುಳುಗಡೆಯಾಗುತ್ತಿದ್ದು, ಸದರಿ ಗ್ರಾಮಗಳ ಪುನರ್ ವಸತಿ ಕೇಂದ್ರಗಳ ನಿರ್ಮಾಣಕ್ಕಾಗಿ ಒಟ್ಟು 4880ಎ-24ಗುಂ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಭೂಸ್ವಾಧೀನತೆಯ ಪ್ರಕ್ರಿಯೆಯ ವಿವಿಧ ಹಂತದ ವಿವರಗಳು ಈ ಕೆಳಗಿನಂತಿವೆ:

ವಿವರ	ಎ-ಗುಂ.
ಐತೀರ್ಪು ಅನುಮೋದನೆಯಾದ ಕ್ಷೇತ್ರ	1743-09
ಐತೀರ್ಪು ಹಂತ	51-05
ನ್ಯಾಯಾಲಯದ ತಡೆಯಾಜ್ಞೆ	629-29
ಪ್ರಸ್ತಾವನೆ ಹಂತ	2455-01
ಒಟ್ಟು	**4879-04**

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಆ	ಉಳಿದ ಗ್ರಾಮಗಳಿಗೆ ಯಾವ ಕಾಲಮಿತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು;	ಮುಳುಗಡೆಯಾಗುವ 20 ಗ್ರಾಮಗಳ ಪುನರ್ ವಸತಿ ಕೇಂದ್ರಗಳಲ್ಲಿ 9 ಗ್ರಾಮಗಳ ಪುನರ್ ವಸತಿಗಾಗಿ 1743 ಎಕರೆ 09 ಗುಂಟೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. 51 ಎಕರೆ 05 ಗುಂಟೆ ಐತೀರ್ಪು ಹಂತದಲ್ಲಿದ್ದು, 112 ಎಕರೆ 22 ಗುಂಟೆ ಕ್ಷೇತ್ರಕ್ಕೆ ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ. ಬಾಕಿ ಉಳಿದ ಗ್ರಾಮಗಳ ಪೈಕಿ 3 ಗ್ರಾಮಗಳು ಭೂಸ್ವಾಧೀನ ಪ್ರಕ್ರಿಯೆಗೆ ನ್ಯಾಯಾಲಯ ತಡೆಯಾಜ್ಞೆ ಇರುತ್ತದೆ. 8 ಗ್ರಾಮಗಳು ಪ್ರಸ್ತಾವನೆ ಹಂತದಲ್ಲಿರುತ್ತವೆ.
ಇ	ಯಾವ ಯಾವ ಗ್ರಾಮಗಳು ಸದರಿ ಭೂಸ್ವಾಧೀನ ವ್ಯಾಪ್ತಿಯಲ್ಲಿವೆ; (ಗ್ರಾಮವಾರು, ಸಂಪೂರ್ಣ ವಿವರ ನೀಡುವುದು)	20 ಗ್ರಾಮಗಳ ಸ್ಥಳಾಂತರಕ್ಕಾಗಿ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಗುರುತಿಸಿರುವ ಜಮೀನುಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.
ಈ	ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ಪರಿಹಾರ ಒದಗಿಸಲಾಗಿದೆಯೇ; ಇಲ್ಲವಾದಲ್ಲಿ, ಯಾವ ಕಾಲಮಿತಿಯಲ್ಲಿ ಸಂತ್ರಸ್ಥರಿಗೆ ಪರಿಹಾರ ನೀಡಲಾಗುವುದು;	ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಧನ ನೀಡಲಾಗಿದೆ.

ಉ	ಭೂಸ್ವಾಧೀನ ಪಡಿಸಿಕೊಂಡ ಪುನರ್ವಸತಿ ಕೇಂದ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗಿವೆಯೇ; ಹಾಗಿದ್ದಲ್ಲಿ, ಅವುಗಳು ಯಾವ ಹಂತದಲ್ಲಿವೆ? (ಪುನರ್ವಸತಿ ಕೇಂದ್ರವಾರು ಅವುಗಳ ಸಂಪೂರ್ಣ ವಿವರ ನೀಡುವುದು)	ಮುಳುಗಡೆ ಹೊಂದುವ ಗ್ರಾಮಗಳ ಸ್ಥಳಾಂತರಕ್ಕಾಗಿ ಜಮೀನುಗಳನ್ನು ಗುರುತಿಸಿದ್ದು, ಭೂಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ನಿವೇಶನ ರಚನೆ, ರಸ್ತೆ ಕಾರ್ಯ, ಚರಂಡಿ, ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಹಾಗೂ ಕೆಲವೊಂದು ಜಮೀನುಗಳಲ್ಲಿ ನಿವೇಶನ ರಚನೆಗೆ ಟೆಂಡರ್ ಕರೆಯಲಾಗಿದೆ. ಪುನರ್ವಸತಿ ಕೇಂದ್ರಗಳಿಗಾಗಿ ಗುರುತಿಸಿದ ಜಮೀನುಗಳಿಗೆ ತಡೆಯಾಜ್ಞೆಯಿರುತ್ತದೆ ಹಾಗೂ ಅಸಿಂಧುವಾಗಿರುತ್ತವೆ. ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ.

ಸಂಖ್ಯೆ: ಜಸಂಇ 19 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಅನುಬಂಧ-1

20 ಗ್ರಾಮ ಸ್ಥಳಾಂತರಕ್ಕಾಗಿ ಪುನರ್ವಸತಿ ಕೇಂದ್ರ ನಿರ್ಮಾಣದ ಜಮೀನು ಭೂಸ್ವಾಧೀನ ಪ್ರಗತಿ ವಿವರ

ಕ್ರ. ಸಂ	ಮುಳುಗಡೆ ಗ್ರಾಮಗಳ ಹೆಸರು	ತಾಲೂಕ	ಪುನರ್ವಸತಿ ಕೇಂದ್ರಕ್ಕಾಗಿ ಆಯ್ಕೆಯಾದ ಗ್ರಾಮದ ಹೆಸರು	ಭೂಸ್ವಾಧೀನ ಪಡಿಸ ಬೇಕಾದ ಕ್ಷೇತ್ರ	ಈಗಾಗಲೇ ಐತೀರ್ಪು ಹೊರಡಿ ಸಲಾದ ಕ್ಷೇತ್ರ	ಬಾಕಿ ಉಳಿದ ಕ್ಷೇತ್ರ	ಪ್ರಸ್ತುತ ಹಂತ
1	2	3	4	5	6	7	8
1	ಅಂಕಲಗಿ	ಬಾಗಲಕೋಟೆ	ಖಜ್ಜಿಡೋಣಿ	99–00	99–00	0	ದಿ. 18–5–18 ರಂದು ಐತೀರ್ಪು ಮಾಡಲಾಗಿದೆ.
			ಖಜ್ಜಿಡೋಣಿ	25–39	0	25–39	ಐತೀರ್ಪು ಹಂತದಲ್ಲಿದೆ.
2	ಶಿರಬೂರ	ವಿಜಯಪುರ	ಮಹಾಲ ಬಗಾಯತ	102–01	102–01	0	ದಿ. 09–2–18 ರಂದು ಐತೀರ್ಪು ಮಾಡಲಾಗಿದೆ.
3	ಚಿಕ್ಕಗಲಗಲಿ	ವಿಜಯಪುರ	ಮಹಾಲ ಬಗಾಯತ	161–29	161–29	0	ದಿ. 20–2–18 ರಂದು ಐತೀರ್ಪು ಮಾಡಲಾಗಿದೆ.
	ಚಿಕ್ಕಗಲಗಲಿ& ಶಿರಬೂರ			13–21	0	13–21	ಐತೀರ್ಪು ಹಂತದಲ್ಲಿದೆ.
				7–00	0	7–00	ಐತೀರ್ಪು ಹಂತದಲ್ಲಿದೆ.
			ಮಹಾಲ ಬಗಾಯತ (ಹೆಚ್ಚುವರಿ ಕ್ಷೇತ್ರ)	42–19	42–19	0	ದಿ. 20–2–18 ರಂದು ಐತೀರ್ಪು ಮಾಡಲಾಗಿದೆ.
	ಚಿಕ್ಕಗಲಗಲಿ& ಶಿರಬೂರ	ವಿಜಯಪುರ	ಜುಂಜರಕೊಪ್ಪ	171–32	171–32	0	ದಿ. 20–2–18 ರಂದು ಐತೀರ್ಪು ಮಾಡಲಾಗಿದೆ.
			ಜುಂಜರಕೊಪ್ಪ (ಹೆಚ್ಚುವರಿ ಕ್ಷೇತ್ರ)	4–25	0	4–25	ಐತೀರ್ಪು ಹಂತದಲ್ಲಿದೆ.
4	ಕುಂದರಗಿ	ಬೀಳಗಿ	ಕುಂದರಗಿ	348–05	348–05	0	ದಿ. 23–1–17 ರಂದು ಐತೀರ್ಪು ಮಾಡಲಾಗಿದೆ.
5	ಬಾವಲತ್ತಿ	ಬೀಳಗಿ	ಬಾವಲತ್ತಿ & ಕೋವಳ್ಳಿ	150–00	150–00	0	ದಿ. 23–1–17 ರಂದು ಐತೀರ್ಪು ಮಾಡಲಾಗಿದೆ.
6	ಕೊಪ್ಪ ಎಸ್.ಕೆ.	ಬೀಳಗಿ	ಹಲಗಲಿ	170–29	170–29	0	ದಿ.16–6–16 ರಂದು ಐತೀರ್ಪು ಮಾಡಲಾಗಿದೆ.
7	ಚಿಕ್ಕೂರ	ಮುಧೋಳ	ಲೋಕಾಪೂರ	217–23	217–23	0	ದಿ.8–6–17 ರಂದು ಐತೀರ್ಪು ಮಾಡಲಾಗಿದೆ.
8	ಮಾಚಕನೂರ	ಮುಧೋಳ	ಜುಂಜರಕೊಪ್ಪ & ವಜ್ರಮಟ್ಟಿ	225–26	225–26	0	ದಿ. 03–2–17 ರಂದು ಐತೀರ್ಪು ಮಾಡಲಾಗಿದೆ.
9	ಸನಾಳ	ಜಮಖಂಡಿ	ಸನಾಳ	166–24	54–02	112–22	54ಎ2ಗುಂ. ದಿ. 10–2–17 ರಂದು ಐತೀರ್ಪು ಮಾಡಲಾ ಗಿದ್ದು, ಉಳಿದ ಕ್ಷೇತ್ರಕ್ಕೆ ಭೂಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ
10	ಕಾತರಕಿ	ಬೀಳಗಿ	ಕಾತರಕಿ	197–04	0	197–04	ಕಲಂ 11(1) ಹೊರಡಿ ಸಲಾಗಿದ್ದು, ನ್ಯಾಯಾಲಯ ದಲ್ಲಿ ತಡೆ ಆಜ್ಞೆ ಇರುವುದು.
11	ಹಿರೇಸಂಶಿ	ಬಾಗಲಕೋಟೆ	ಗೋವಿಂದಕೊಪ್ಪ	105–39	0	105–39	ಕಲಂ 11(1) ಹೊರಡಿಸಲಾಗಿದ್ದು, ನ್ಯಾಯಾಲಯದಲ್ಲಿ ತಡೆ ಆಜ್ಞೆ ಇರುವುದು.

ಕ್ರ ಸಂ	ಮುಳುಗಡೆ ಗ್ರಾಮಗಳ ಹೆಸರು	ತಾಲೂಕ	ಪುನರ್ವಸತಿ ಕೇಂದ್ರಕ್ಕಾಗಿ ಆಯ್ಕೆಯಾದ ಗ್ರಾಮದ ಹೆಸರು	ಭೂಸ್ವಾಧೀನ ಪಡಿಸ ಬೇಕಾದ ಕ್ಷೇತ್ರ	ಈಗಾಗಲೇ ಐತೀರ್ಪು ಹೊರಡಿ ಸಲಾದ ಕ್ಷೇತ್ರ	ಬಾಕಿ ಉಳಿದ ಕ್ಷೇತ್ರ	ಪ್ರಸ್ತುತ ಹಂತ
12	ಗೋವಿಂದಕೊಪ್ಪ	ಬಾಗಲಕೋಟೆ	ಗೋವಿನಕೊಪ್ಪ ತುಳಸಿಗೇರಿ	96–04	0	96–04	ಕಲಂ 11(1) ಹೊರಡಿಸಲಾಗಿದ್ದು, ನ್ಯಾಯಾಲಯದಲ್ಲಿ ತಡೆ ಆಜ್ಞೆ ಇರುವುದು.
13	ಊದಗಟ್ಟಿ	ಬಾಗಲಕೋಟೆ	ಲೋಕಾಪೂರ	118–00	0	118–00	ಭೂ ಮಾಲೀಕರಿಂದ ತಕರಾರು ಇರುವುದರಿಂದ ಅಸಿಂಧುವಾಗಿದೆ.
14	ವಂದಾಲ	ಬಸವನ ಬಾಗೇವಾಡಿ	ವಂದಾಲ & ಹುಣಶ್ಯಾಳ	526–06	0	526–06	ಅಸಿಂಧುವಾಗಿದ್ದು, ಮರು ಪ್ರಸ್ತಾವನೆ ತಯಾರಿಸ ಲಾಗುತ್ತಿದೆ.
15	ಬುದ್ನಿ ಬಿ.ಕೆ.	ಮುಧೋಳ	ಬುದ್ನಿ ಬಿ.ಕೆ. & ಅಂತಾಪೂರ	54–20 39–08	0	54–20 39–08	ಅಸಿಂಧುವಾಗಿದ್ದು, ಮರು ಪ್ರಸ್ತಾವನೆ ತಯಾರಿ ಸಲಾಗುತ್ತಿದೆ.
16	ಬಂಟನೂರ	ಮುಧೋಳ	ಲೋಕಾಪೂರ & ಚೌಡಾಪೂರ	391–31	0	391–31	ಅಸಿಂಧುವಾಗಿದ್ದು, ಮರು ಪ್ರಸ್ತಾವನೆ ತಯಾರಿಸಲಾಗುತ್ತಿದೆ.
17	ಆಲಗುಂಡಿ	ಮುಧೋಳ	ಆಲಗುಂಡಿ & ಜುಂಜರಕೊಪ್ಪ	216–21	0	216–21	ಅಸಿಂಧುವಾಗಿದ್ದು, ಮರು ಪ್ರಸ್ತಾವನೆ ತಯಾರಿಸಲಾಗುತ್ತಿದೆ.
18	ಹಿರೇಪಡಸಲಗಿ	ಜಮಖಂಡಿ	ಸಾವಳಗಿ, ಮದರಖಂಡಿ & ತೊದಲಬಾಗಿ	650–24	0	650–24	ಅಸಿಂಧುವಾಗಿದ್ದು, ಮರು ಪ್ರಸ್ತಾವನೆ ತಯಾರಿಸಲಾಗುತ್ತಿದೆ
19	ಕುಂಬಾರಹಳ್ಳ	ಜಮಖಂಡಿ	ಜಮಖಂಡಿ	341–31	0	341–31	ಅಸಿಂಧುವಾಗಿದ್ದು, ಮರು ಪ್ರಸ್ತಾವನೆ ತಯಾರಿಸಲಾಗುತ್ತಿದೆ.
20	ಗದ್ದನಕೇರಿ	ಬಾಗಲಕೋಟೆ	ಗದ್ದನಕೇರಿ	230–00	0	230–00	ಎಫ್.ಆರ್.ಎಲ್. 524.256 ಮೀಟರಡಿ ಬರುವುದಿಲ್ಲವೆಂದು ಕುರಿತು ಪರಿಶೀಲನಾ ಹಂತದಲ್ಲಿದೆ.
	ಒಟ್ಟು			**4879–04**	**1743–09**	**3135–35**	

ಅನುಬಂಧ – 2

ಕೃ.ಮೇ.ಯೋ ಹಂತ–3 ರಲ್ಲಿ ಪುನರ್ವಸತಿ ಕೇಂದ್ರಗಳಲ್ಲಿಯ ಅಭಿವೃದ್ಧಿ ಕಾರ್ಯಗಳ ವಿವರ.

ಕ್ರ.ಸಂ.	ಮುಳುಗಡೆ ಗ್ರಾಮಗಳ ಹೆಸರು	ಪುನರ್ವಸತಿ ಕೇಂದ್ರಕ್ಕಾಗಿ ಆಯ್ಕೆಯಾದ ಗ್ರಾಮದ ಹೆಸರು	ಭೂಸ್ವಾಧೀನ ಪ್ರಗತಿ	ಷರಾ
1	2	3	4	5
1	ಹಿರೇಸಂಶಿ	ಗೋವಿಂದಕೊಪ್ಪ	ತಡೆಯಾಜ್ಞೆ ಇದೆ	–
2	ಅಂಕಲಗಿ	ಬಜ್ಜಿಡೋಣಿ	ಐತೀರ್ಪು ಮಂಜೂರಾಗಿದೆ	ಇನ್ನು 28 ಎಕರೆ ಜಮೀನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ನಿವೇಶನ ರಚನೆ ಪ್ರಾರಂಭಿಸಿರುವುದಿಲ್ಲ.
3	ಗೋವಿಂದಕೊಪ್ಪ	ಗೋವಿನಕೊಪ್ಪ & ತುಳಸಿಗೇರಿ	ತಡೆಯಾಜ್ಞೆ ಇದೆ	–
4	ಉದಗಟ್ಟಿ	ಲೋಕಾಪೂರ	ತಕರಾರು	–
5	ಗದ್ದನಕೇರಿ	ಗದ್ದನಕೇರಿ	ಮುಳುಗಡೆ ವ್ಯಾಪ್ತಿಯಲ್ಲಿ ಬರುವುದಿಲ್ಲ	–
6	ಶಿರಬೂರ	ಮಹಾಲಬಾಗಾಯತ	ಐತೀರ್ಪು ಮಂಜೂರಾಗಿದೆ	ನಿವೇಶನ ರಚನೆ ರಸ್ತೆ ಕಾರ್ಯ ಪೂರ್ಣಗೊಂಡಿದ್ದು ಬದಿ ಚರಂಡಿ, ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.
7	ಚಿಕ್ಕಗಲಗಲಿ	ಮಹಾಲಬಾಗಾಯತ	ಐತೀರ್ಪು ಮಂಜೂರಾಗಿದೆ	ಟೆಂಡರ್ ಕರೆದು ನಿವೇಶನ ರಚಿಸ ಬೇಕಾಗಿದೆ
	ಚಿಕ್ಕಗಲಗಲಿ & ಶಿರಬೂರ	ಝುಂಜುರಕೊಪ್ಪ	ಐತೀರ್ಪು ಮಂಜೂರಾಗಿದೆ	ನಿವೇಶನ ರಚನೆ ಕಾರ್ಯ ಪ್ರಗತಿಯಲ್ಲಿದೆ
8	ವಂದಾಲ	ವಂದಾಲ & ಹುಣಶ್ಯಾಳ	ಅಸಿಂಧುವಾಗಿದೆ	–
9	ಕುಂದರಗಿ	ಕುಂದರಗಿ	ಐತೀರ್ಪು ಮಂಜೂರಾಗಿದೆ	–
10	ಬಾವಲತ್ತಿ	ಬಾವಲತ್ತಿ & ಕೊವಳ್ಳಿ	ಐತೀರ್ಪು ಮಂಜೂರಾಗಿದೆ	ವಿನ್ಯಾಸ ನಕ್ಷೆ ರಚಿಸಿದೆ
11	ಕಾತರಕಿ	ಕಾತರಕಿ	ತಡೆಯಾಜ್ಞೆಇದೆ	–

ಕ್ರ.ಸಂ.	ಮುಳುಗಡೆ ಗ್ರಾಮಗಳ ಹೆಸರು	ಪುನರ್ವಸತಿ ಕೇಂದ್ರಕ್ಕಾಗಿ ಆಯ್ಕೆಯಾದ ಗ್ರಾಮದ ಹೆಸರು	ಭೂಸ್ವಾಧೀನ ಪ್ರಗತಿ	ಷರಾ
12	ಕೊಪ್ಪಎಸ್.ಕೆ.	ಹಲಗಲಿ	ಐತೀರ್ಪು ಮಂಜೂರಾಗಿದೆ	–
13	ಬುದ್ನಿ ಬಿ.ಕೆ.	ಬುದ್ನಿ ಬಿ ಕೆ & ಅಂತಾಪೂರ	ಅಸಿಂಧುವಾಗಿದೆ	–
14	ಚಿಕ್ಕೂರ	ಲೋಕಾಪೂರ	ಐತೀರ್ಪು ಮಂಜೂರಾಗಿದೆ	ವಿನ್ಯಾಸ ನಕ್ಷೆ ರಚಿಸಿದ್ದು, ಬಾಗಲಕೋಟೆ ಕುಡಚಿ ರೇಲ್ವೆ ಮಾರ್ಗ ಪುನರ್ವಸತಿ ಕೇಂದ್ರದಲ್ಲಿ ಸಾಗುವುದರಿಂದ ವಿನ್ಯಾಸ & ನಕ್ಷೆ ಮಾರ್ಪಾಡು ಮಾಡಬೇಕಾಗಿದೆ.
15	ಮಾಚಕನೂರ	ಝುಂಜುರಕೊಪ್ಪ & ವಜ್ರಮಟ್ಟಿ	ಐತೀರ್ಪು ಮಂಜೂರಾಗಿದೆ	–
16	ಬಂಟನೂರ	ಲೋಕಾಪೂರ & ಚೌಡಾಪೂರ	ಅಸಿಂಧುವಾಗಿದೆ	–
17	ಆಲಗುಂಡಿ	ಆಲಗುಂಡಿ & ಝುಂಜುರಕೊಪ್ಪ	ಅಸಿಂಧುವಾಗಿದೆ	–
18	ಸನಾಳ	ಸನಾಳ	ತಡೆಯಾಜ್ಞೆಇದೆ	–
19	ಹಿರೇಪಡಸಲಗಿ	ಸಾವಳಗಿ, ಮದರಖಂಡಿ & ತೊದಲಬಾಗಿ	ಅಸಿಂಧುವಾಗಿದೆ	–
20	ಕುಂಬಾರಹಳ್ಳ	ಜಮಖಂಡಿ	ಅಸಿಂಧುವಾಗಿದೆ	–